ಅ) ಕೆ.ಎಸ್.ಆರ್.ಟಿ.ಸಿ ನೌಕರಿಯಲ್ಲಿದ್ದು ಸೇವೆಯಿಂದ ನಿವೃತ್ತರಾದವರಿಗೆ ಬಸ್ ಪಾಸ್ ನೀಡುವ ಸೌಲಭ್ಯ ಜಾರಿಗೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಮಂದಿ ನಿವೃತ್ತ ನೌಕರರ ಈ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ?

ಶ್ರೀ ಭೀಮಣ್ಣ ಖಂಡ್ರೆ(ಸಾರಿಗೆ ಸಚಿವರು):-

ಅ) ಹೌದು.

ಆ) 1992ನೇ ಸಾಲಿನಲ್ಲಿ 1307 ನಿವೃತ್ತ ನೌಕರರು ವಾರ್ಷಿಕ ಬಸ್ ಪಾಸಿನ ಸೌಲಭ್ಯವನ್ನು ಉಪಯೋಗಿಸಿಕೊಂಡಿರುತ್ತಾರೆ. 805 ನಿವೃತ್ತ ನೌಕರರು ನಗರ ಸಾರಿಗೆಗಳಲ್ಲಿ ಉಚಿತ ಪಾಸಿನ ಸೌಲಭ್ಯವನ್ನು ಪಡೆದಿರುತ್ತಾರೆ.

ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳ ವಿದೇಶಿ ಪ್ರವಾಸ.

964(45) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್ ಅಧಿಕಾರಿಗಳಲ್ಲಿ ಯಾರು ಯಾರು ಎಷ್ಟು ಬಾರಿ ವಿದೇಶ ಪ್ರವಾಸ ಮಾಡಿದ್ದಾರೆ?

ಶ್ರೀ.ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

1991ರಿಂದ 1992ರ ಅಂತ್ಯದವರೆಗೆ 22 ಜನ ಭಾರತೀಯ ಆಡಳಿತ ಸೇವಾ ಅಧಿಕಾರಿಗಳು (ಐ.ಎ.ಎಸ್) ವಿದೇಶ ಪ್ರವಾಸ ಮಾಡಿ ಬಂದಿರುತ್ತಾರೆ.(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಅನುಬಂಧ

1991 ಮತ್ತು 1992 ರಲ್ಲಿ ವಿದೇಶ ಪ್ರವಾಸ ಮಾಡಿದ ಐಎಸ್ ಅಧಿಕಾರಿಗಳ ವಿವರ

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪದನಾಮ	ಮಾಡಿದ ವಿದೇಶಿ ಪ್ರವಾಸ		
		1991	1992	ಒಟ್ಟು
	ಶ್ರೀಯುತರುಗಳಾದ			
1.	ಜಿ. ಮುನಿಯಪ್ಪ, ಐಎಎಸ್ ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಮಿನರಲ್ಸ್ ನಿಯಮಿತ, ಬೆಂಗಳೂರು	1	1	2

	ನಿರ್ದೇಶಕರು, ಹಟ್ಟಿ ಗೋಲ್ಡ್ ಮೈನ್ಸ್ ಬೆಂಗಳೂರು			
3.	ಎಸ್.ಆರ್. ವಿಜಯ್, ಐಎಎಸ್ ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ. ಬೆಂಗಳೂರು	1	2	3
4.	ಎ. ರವೀಂದ್ರ, ಐಎಎಸ್ ಆಗಿನ ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ, ಬೆಂಗಳೂರು	1	–	1
5.	ಎಂ. ಮದನಗೋಪಾಲ್, ಐಎಎಸ್ ಆಗಿನ ಮುಖ್ಯಕಾರ್ಯದರ್ಶಿ ಜಿಲ್ಲಾ ಪರಿಷತ್ತು, ರಾಯಚೂರು.	1	–	1
6.	ಎಸ್. ಕೃಷ್ಣಕುಮಾರ್, ಐಎಎಸ್ ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ವಿಕ್ರಾಂತ್ ಟೈರ್ಸ್ ನಿ. ಮೈಸೂರು	1	1	2
7.	ಪುಟ್ಟಸ್ವಾಮೇಗೌಡ, ಐಎಎಸ್ ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಬೆಂಗಳೂರು.	1	–	1
8.	ಅರವಿಂದ ಜಾದವ್, ಐಎಎಸ್ ಅಪರ ನಿರ್ದೇಶಕರು (ವಿಶ್ವ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಬೆಂಗಳೂರು.	–	1	1
9.	ಬಿ.ಎಸ್. ಪಾಟೀಲ್, ಐಎಎಸ್ ಆಗಿನ ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು	–	2	2
10.	ಜೆ. ಅಲೆಗ್ಸಾಂಡರ್, ಐಎಎಸ್ ಆಗಿನ ಅಧ್ಯಕ್ಷರು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಬೆಂಗಳೂರು	–	1	1
11.	ಎಂ. ಮಹೇಶನ್, ಐಎಎಸ್ ಆಗಿನ ವ್ಯವಸ್ಥಾಪಕ ನಿರ್ದೇಶಕರು	–	1	1

	ಕರ್ನಾಟಕ ರಾಜ್ಯ ಹಣಕಾಸು ನಿಗಮ ಬೆಂಗಳೂರು.			
12.	ಎನ್. ವಿಶ್ವನಾಥನ್, ಐಎಎಸ್ ಆಗಿನ ಮುಖ್ಯಮಂತ್ರಿಯವರ ಕಾರ್ಯದರ್ಶಿ ಬೆಂಗಳೂರು.	–	3	3
13.	ಎಂ.ಸಿ. ಸತ್ಯವಾದಿ, ಐಎಎಸ್ ಆಗಿನ ರೇಷ್ಮೆ ನಿರ್ದೇಶಕರು ಬೆಂಗಳೂರು.	–	1	1
14.	ಎಸ್.ಎನ್. ಶಾಂತಕುಮಾರ್, ಐಎಎಸ್ ಆಗಿನ ಸರ್ಕಾರದ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರು.	–	1	1
15.	ಎ. ಸೇನಗುಪ್ತ, ಐಎಎಸ್ ಆಗಿನ ವ್ಯವಸ್ಥಾಪಕ ನಿರ್ದೇಶಕರು ಕ. ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು (ನಿ.) ಬೆಂಗಳೂರು.	–	1	1
16.	ಎಸ್.ಬಿ. ಮುದ್ದಪ್ಪ, ಐಎಎಸ್ ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎನ್.ಜಿ.ಇ.ಎಫ್. ಬೆಂಗಳೂರು.	–	1	1
17.	ಕೆ.ವಿ. ಇನ್ನಿರಾಯ, ಐಎಎಸ್ ಆಗಿನ ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ ಇಂಧನ ಇಲಾಖೆ, ಬೆಂಗಳೂರು	–	2	2
18.	ಬ್ರಹ್ಮದತ್, ಐಎಎಸ್ ಆಗಿನ ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	–	1	1
19.	ಕೆ.ಪಿ. ಸಿಂಗ್, ಐಎಎಸ್ ಸ್ಥಾನಿಕ ಆಯುಕ್ತರು, (ರೆಸಿಡೆಂಟ್ ಕಮಿಷನರ್) ಕರ್ನಾಟಕ ಭವನ, ನವದೆಹಲಿ.	–	1	1
20.	ಸಿ. ಮುನಿಸ್ವಾಮಿ, ಐಎಎಸ್ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ವಿಕ್ರಾಂತ್ ಟೈರ್ಸ್, ಮೈಸೂರು.	–	2	2
21.	ಪಿ. ರವಿಕುಮಾರ್, ಐಎಎಸ್ ಜಿಲ್ಲಾಪರಿಷತ್ತಿನ ಮುಖ್ಯಕಾರ್ಯದರ್ಶಿ ಬೀದರ್ ಜಿಲ್ಲೆ, ಬೀದರ್	–	1	1

22.	ಐ.ಎಂ. ವಿಠಲಮೂರ್ತಿ, ಐಎಎಸ್ ಆಗಿನ ಜಿಲ್ಲಾಧಿಕಾರಿ, ಬಿಜಾಪುರ	-	1	1
		7	25	32

ಬೆಂಗಳೂರು ನಗರದಲ್ಲಿ ರೌಡಿಗಳ ಹಾವಳಿ ಹಾಗೂ ಕಳ್ಳತನ ತಡೆಗಟ್ಟುವ ಬಗ್ಗೆ.

965(1500) ಶ್ರೀ ಹೆಚ್.ಎಂ.ರೇವಣ್ಣ(ಮಾಗಡಿ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಗುಂಡಾಯಿಜಮ್ ರೌಡಿಗಳ ಹಾವಳಿ ಹಾಗೂ ಕಳ್ಳತನ ಹೆಚ್ಚುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಲಾಲ್‌ಭಾಗ್-ಸಿದ್ಧಾಪುರ ಪಿ.ಡಬ್ಲ್ಯುಡಿ ಕ್ವಾರ್ಟರ್ಸ್‌ಗಳ ಹಾಗೂ ಐ.ಕೆ.ಕಾಲೋನಿಯ ಮುಂದೆ ಇರುವ ರಸ್ತೆಗಳಲ್ಲಿ ರೌಡಿಗಳು ರಸ್ತೆಯಲ್ಲಿ ನಿಂತು ಮಹಿಳೆಯರನ್ನು ಚುಡಾಯಿಸುವುದು ಇತ್ಯಾದಿ ರೀತಿಯಲ್ಲಿ ತೊಂದರೆಕೊಡುತ್ತಿರುವುದರಿಂದ ಅಂತಹ ರೌಡಿಗಳ ಹಾಗೂ ಪೋಲೀ ಹುಡುಗರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು ಮಹಿಳೆಯರಿಗೆ ರಸ್ತೆಗಳಲ್ಲಿ ನಿರ್ಭೀತಿಯಿಂದ ಓಡಾಡಲು ರಕ್ಷಣೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಹಾಗಿದ್ದಲ್ಲಿ, ನಗರದಲ್ಲಿ ಇಂತಹ ರೌಡಿಗಳ ಹಾವಳಿಯನ್ನು ಹಾಗೂ ಕಳ್ಳತನನಾಗುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳುವ ಕ್ರಮಗಳಾವುವು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ಬಂದಿದೆ.

ಆ) ಈ ಸ್ಥಳಗಳಲ್ಲಿ ನಡೆದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-

ವರ್ಷಗಳು	ಒಟ್ಟು ಪ್ರಕರಣಗಳು	ಪತ್ತೆಯಾದ ಪ್ರಕರಣಗಳು	ಬಂಧಿಸಿದ ವ್ಯಕ್ತಿಗಳ ಸಂಖ್ಯೆ
1992	335	108	115
1993 (ಮಾರ್ಚ್‌ವರೆಗೆ)	72	41	60

ಇ) ಇಂತಹ ಸಮಾಜಘಾತುಕ ವ್ಯಕ್ತಿಗಳ ಮೇಲೆ ಸದಾ ನಿಗಾ ಇಡಲು ಬೀಟ್ ಪೋಲೀಸಿನವರಿಗೆ ಎಚ್ಚರಿಕೆ ನೀಡಲಾಗಿದೆ. ರಾತ್ರಿ ಗಸ್ತು ತಿರುಗುವ ಪೋಲೀಸ್ ಅಧಿಕಾರಿಗಳಿಗೆ ನಿಗಾ ಇಟ್ಟು ಸಾರ್ವಾಜನಿಕರಿಗೆ ರಕ್ಷಣೆ ನೀಡುವಂತೆ ತಿಳುವಳಿಕೆ ನೀಡಲಾಗಿದೆ.

ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಖಾಸಗೀಕರಣ.

966(917) ಶ್ರೀ ಹೆಚ್.ಎಂ.ರೇವಣ್ಣ(ಮಾಗಡಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?